# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ

CC No : 192/2016

CW. 1 PW. 1

*ಹೆಸರು : ಶಿವಣ್ಣ*
*ತಂದೆ/ಗಂಡ : ಚಿಕ್ಕಣ್ಣ*
*ವಯಸ್ಸು : 56 ವರ್ಷ*
*ಉದ್ಯೋಗ : ಲೇಬರ್*
*ವಾಸ : ಚನ್ನಪಟ್ಟಣ*

*ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣವಚನ ಬೋದಿಸಲಾಯಿತು.*
*ಮುಖ್ಯ ವಿಚಾರಣೆ ಎಪಿಪಿ ಯವರಿಂದಃ ದಿಃ **30.11.2018***

1. ಚಾಸಾ-2 ಗೊತ್ತು. ಮೃತ ಮನೋಹರ್ ನನ್ನ ಮಗ. ಅಂದಾಜು 4 ವರ್ಷಗಳ ಹಿಂದೆ ಸುಮಾರು ರಾತ್ರಿ 8.00 ರಿಂದ 9.00 ಗಂಟೆ ಸಮಯದಲ್ಲಿ ನನ್ನ ಮಗ ಮನೋಹರಗೆ ಅಪಘಾತವಾಗಿದೆ ಎಂದು ದೂರವಾಣಿ ಮೂಲಕ ತಿಳಿಯಿತು. ತಕ್ಷಣ ನಾನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ಮಗ ಮರಣ ಹೊಂದಿರುತ್ತಾನೆ ಎಂದು ತಿಳಿಯಿತು. ಈಗ ನೋಡಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದೂರು ಆಗಿರುತ್ತದೆ ಇದನ್ನು **ನಿಪಿ-1** ಎಂದು ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ.

**ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಲಾಯಿತು. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲು ಎ ಪಿ ಪಿ ಯವರಿಂದ</u>**

2. ದಿ.25.04.2015 ರಂದು ರಾತ್ರಿ 8.45 ರ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಅಪಘಾತವಾದ ವಿಷಯ ತಿಳಿಯಿತು ಎಂದರೆ ಸರಿ. ನಾನು ಸಾತನೂರು ವೃತ್ತದ ಬಳಿ ಹೋಗಿ ನೋಡಲಾಗಿ ಚಾಸಾ-2 ರವರೊಂದಿಗೆ ನನ್ನ ಮಗ ಗಾಡಿ ಓಡಿಸುತ್ತಿದ್ದ ಎಂದು, ಸಾತನೂರು ವೃತ್ತದ ಬಳಿಯ ಬಿ ಎಮ್ ರಸ್ತೆಯ ಜನತಾ ಸಾಮಿಲ್ ಎದುರು ಆರೋಪಿ ತನ್ನ ಬಾಬ್ತು ವಾಹನ ಟಯೋಟ ಕಾವಲೀಸ್ ಕಾರ್ ಸಂಖ್ಯೆ ಕೆಎ-02- ಎಮ್ ಇ-3322 ಅನ್ನು ಅತಿ ವೇಗ ಮತ್ತು ಅಜಾಗರೂಕತೆಯಿಂದ ಓ ಡಿಸಿ ಕೊಂಡು ಬಂದು ನನ್ನ ಮಗ ಬೈಕ್ ಗೆ ಹಿಂದಿನಿಂದ ಡಿಕ್ಕಿ ಹೊಡೆಸಿ ನನ್ನ ಮಗ ಕೆಳಕ್ಕೆ ಬಿದು ಸ್ಥಳದಲ್ಲಿಯೇ ಮೃತಪಟ್ಟ ಎಂದು ಚಾಸಾ-2 ರವರನ್ನು ಗಾಯಗೊಂಡ ಕಾರಣ ಆಸ್ಪತ್ರೆಗೆ ದಾಖಲಾಯಿಸಲಾಯಿತು ಎಂದು ನಿಪಿ-1 ರಂತೆ ಆರೋಪಿಯ ವಿರುದ್ದ ಕ್ರಮ ಕೈ ಗೊಳ್ಳಲು ದೂರು ನೀಡಿದ್ದೇನೆ ಎಂದರೆ ಸುಳ್ಳು. ನಿಪಿ-1 ರ ಅಂಶ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು ಆರೊಪಿ ಪರ ವಕೀಲರಿಂದ</u>**

ಏನು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಚನ್ನಪಟ್ಟಣ